ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು-560065
* ಸಮಗ್ರ ಕೃಷಿ ಹವಾಮಾನ ವರದಿ ಪತ್ರಿಕೆ *

ದಿನಾಂಕ: 28.02.2014

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ.

ಈ ವಾರದ ಮುನ್ಸೂಚನೆ (ದಿನಾಂಕ 01.03.14 –05.03.14 ವರೆಗೆ)

	01.03.14	02.03.14	03.03.14	04.03.14	05.03.14
ಮಳೆ (ಮಿ ಮಿ)	0	0	3	0	5
ಗರಿಷ್ಠ ಉಷ್ಣಾಂಶ(ಡಿ.ಸೆ.)	32	31	30	30	30
ಕನಿಷ್ಠ ಉಷ್ಣಾಂಶ (ಡಿ.ಸೆ.)	18	19	19	18	18
ಮೋಡ (ಪ್ರಮಾಣ)	3	3	2	3	2
ಅರ್ದ್ರತೆ ೭.೨೦ ಬೆ (ಶೇ)	77	82	87	90	86
ಅರ್ದ್ರತೆ ೨.೨೦ ಮ (ಶೇ)	32	39	41	42	39
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	6	7	6	5
ಗಾಳಿಯ ದಿಕ್ಕು (ಡಿಗ್ರಿ)	230	170	160	160	140

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ನಾಲ್ಕು ದಿನಗಳಲ್ಲಿ ಆಕಾಶದಲ್ಲಿ ಆಗಿಂದಾಗ್ಗೆ ಮೋಡಕವಿದ ವಾತವರಣವಿದ್ದು ಮತ್ತು ಉಷ್ಣಾಂಶದ ಏರಿಳಿತದಿಂದ ಅಲ್ಲಲ್ಲಿ ಚದುರಿದಂತೆ ಮಳೆಯಾಗುವ ಸಂಭವವಿರುತ್ತದೆ.ದಿನದ ಗರಿಷ್ಠ ಉಷ್ಣಾಂಶ 30.0-32.0^{o}C ಮತ್ತು ಕನಿಷ್ಠ 18.0-19.0 ^{o}C ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 77-90 % ಇದ್ದು, ಮಧ್ಯಾಹ್ನ 32-42 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 4-7 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ದ್ರಾಕ್ಷಿ : ಬೂಜು ರೋಗದ ಲಕ್ಷಣ ಕಂಡುಬಂದರೆ ಡೈಮೆಥೋಮಾರ್ಫ್ (೧.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ) ಅಥವಾ ಅಜಾಕ್ಸಿಸ್ಟ್ರಾಬಿನ್ (ಅಮಿಸ್ಟಾರ್) (೦.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ) ಅಥವಾ ರಿಡೋಮಿಲ್ (೨ ಗ್ರಾಂ ಪ್ರತಿ ಲೀ. ನೀರಿಗೆ) ಬೆರೆಸಿ ಸಿಂಪಡಿಸುವುದು ಸೂಕ್ತ.
- ಮುಸುಕಿನ ಜೊಳ: ಕಾಳು ಕೊರೆಯುವ ಕೀಟಗಳ ನಿಯಂತ್ರಣಕ್ಕೆ ಸ್ಪೈನೊಸ್ಯಾಡ ೧.೦ ಮಿ.ಲೀ ಪ್ರತಿ ಲೀಟರ್‌ನಲ್ಲಿ ಬೆರಸಿ ಸಿಂಪಡಿಸಬೇಕು ಅಥವಾ ಇನ್ಡಾಕ್ಸಿಕಾರ್ಬ್ 1.5 ಮಿ.ಲಿ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸುವುದು.
- ಮಾವು:ವಾತಾವರಣದಲ್ಲಿ ಬೆಳಗಿನ ಸಮಯದಲ್ಲಿ ಕಡಿಮೆ ಉಷ್ಣಾಂಶ ಮತ್ತು ಹೆಚ್ಚಿನ ಆರ್ದ್ರತೆ ಇರುವುದರಿಂದ ಹೊ ಬಿಡುವ ಹಂತದಲ್ಲಿ ಬೂದಿರೋಗದ ನಿಯಂತ್ರಣಕ್ಕಾಗಿ ಗಿಡಗಳಿಗೆ ಕಾರ್ಬರಿಲ್ ೪.೦ ಗ್ರಾಂ. ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸುವುದು. ಜಿಗಿ ಹುಳು ಕೀಟದ ನಿಯಂತ್ರಣಕ್ಕೆ ಕಾನ್ಫೀಡಾರ್ (Confidor) 0.5 ಮಿ.ಲಿ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸುವುದು.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು.